**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक-संस्कृत-विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## 2019ರ ಜೂನ್ 11ರಂದು ನಡೆದ ಪ್ರಶಿಕ್ಷಣ ಪರಿಷತ್ 27ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ 27ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯು **ಜೂನ್ 11, 2019ರ ಮಂಗಳವಾರ ಬೆಳಿಗ್ಗೆ 11.00** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ,** ಪ್ರಾಚಾರ್ಯರು, ಧಾರವಾಡ | ಸದಸ್ಯರು |
| ೪. | **ಡಾ. ಎಸ್.ಎನ್. ಸಂಪತ್ಕುಮಾರ್,** ಪ್ರಾಚಾರ್ಯರು(ಪ್ರ), ಬೆಂಗಳೂರು | ಸದಸ್ಯರು |
| ೫. | **ಪ್ರೊ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೬. | **ಡಾ. ಬಿ.ವಿ ವೆಂಕಟರಮಣ,** ಡೀನ್, ಶಾಸ್ತ್ರ ನಿಕಾಯ | ಸದಸ್ಯರು |
| ೭. | **ಶ್ರೀಮತಿ ಶಿಲ್ಪ.ಎಂ,** ಕ.ಆ.ಸೇ.ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ವಿದ್ವಾನ್ ನರಸಿಂಹ ಭಟ್ಟ,** ಪ್ರಾಚಾರ್ಯರು, ಸೋಂದಾ | ಸದಸ್ಯರು |
| ೬. | **ವಿದ್ವಾನ್ ರಾಮಚಂದ್ರ ನಾ. ಭಟ್ಟ,** ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೭. | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ವಿಶ್ವವಿದ್ಯಾಲಯದಲ್ಲಿ ಹಾಗೂ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಸಂಸ್ಥೆಗಳ ಮಾನಿತ ಕೋರ್ಸ್‌ಗಳ ಪ್ರವೇಶಾತಿಗಾಗಿ ಮತ್ತು ಶುಲ್ಕದ ವಿವರಗಳಿಗೆ ಅನುಮೋದನೆಯನ್ನು ನೀಡುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಮತ್ತು ಮಾನ್ಯತೆ ಪಡೆದ ಇತರ ಸಂಸ್ಥೆಗಳಲ್ಲಿ 2019–20ನೇ ಸಾಲಿಗೆ ಪ್ರವೇಶಾತಿಗಾಗಿ ಅಧಿಸೂಚನೆ ಹೊರಡಿಸಲಾಗಿದೆ. ಈ ಕೋರ್ಸ್‌ಗಳ ಪ್ರವೇಶಾರ್ಹತೆ ಮತ್ತು ಶುಲ್ಕಗಳ ವಿವರಗಳನ್ನು ಈ ಕೆಳಕಂಡಂತೆ ನಿಗದಿಪಡಿಸಿದೆ ಮತ್ತು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆ ಕೋರಿದೆ. |

| ಕೋರ್ಸ್ | ಪ್ರವೇಶಾರ್ಹತೆ | ಶುಲ್ಕ ವಿವರ |
|---|---|---|
| ಪಿಎಚ್.ಡಿ– ವಿದ್ಯಾವಾರಿಧಿ | 1. ಸಂಸ್ಕೃತ/ಶಾಸ್ತ್ರದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ. 55 ಅಂಕಗಳನ್ನು ಪಡೆದಿರುವವರು ಅರ್ಹರಾಗಿರುತ್ತಾರೆ. (ಪ.ಜಾ/ಪ. ಪಂ. ಹಾಗೂ ಪ್ರವರ್ಗ–1ರ ಅಭ್ಯರ್ಥಿಗಳಿಗೆ ಶೇ. 50). ಸ್ನಾತಕೋತ್ತರ ಪದವಿಯ ಅಂತಿಮ ವರ್ಷ/ಸೆಮಿಸ್ಟರ್ ಪರೀಕ್ಷೆ ಬರೆಯುತ್ತಿರುವ ಅಥವಾ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳೂ ಸಹ ಅರ್ಜಿ ಸಲ್ಲಿಸಬಹುದು.<br>2. ಸರ್ಕಾರದ ನಿಯಮಗಳಂತೆ, ಮೀಸಲಾತಿ ಸೌಲಭ್ಯ ಹೊಂದಿರುವ ಅಭ್ಯರ್ಥಿಗಳಿಗೆ 50% ರಷ್ಟು ಶುಲ್ಕ ವಿನಾಯಿತಿ ಇರುತ್ತದೆ. | (see below) |

| ಶುಲ್ಕ ವಿವರ | ಮೊತ್ತ |
|---|---|
| ಅರ್ಜಿ ಶುಲ್ಕ | 500.00 |
| ಪ್ರವೇಶ ಪರೀಕ್ಷೆ ಶುಲ್ಕ | 1000.00 |
| ತಾತ್ಕಾಲಿಕ ನೋಂದಣಿ ಶುಲ್ಕ | 2000.00 |
| ಕೋರ್ಸವರ್ಕ್ ಶುಲ್ಕ | 2000.00 |
| ಕೋರ್ಸವರ್ಕ್ ಪರೀಕ್ಷಾ ಶುಲ್ಕ | 1000.00 |
| ಕೋರ್ಸವರ್ಕ್ ಮರುಮೌಲ್ಯ ಮಾಪನ ಶುಲ್ಕ (ಪ್ರತಿ ಪತ್ರಿಕೆಗೆ) | 1000.00 |
| ವಾರ್ಷಿಕ ಭೋಧನಾ ಶುಲ್ಕ | 6500.00 |
| ವಾರ್ಷಿಕಗ್ರಂಥಾಲಯ ಶುಲ್ಕ | 500.00 |
| ಪ್ರಬಂಧ ಸಲ್ಲಿಕೆ ಹಾಗೂ ಪರೀಕ್ಷಾ ಶುಲ್ಕ | 10000.00 |
| ಘಟಿಕೋತ್ಸವದ ಶುಲ್ಕ (ಪ್ರಮಾಣ ಪತ್ರ– ಸಂಸ್ಕೃತ&ಆಂಗ್ಲ) | 1000.00 |

<table>
<tr><td></td><td></td><td><table><tr><td>ಪ್ರಬಂಧ ಪ್ರಕಟಣೆ ಅನುಮತಿ ಶುಲ್ಕ</td><td>3500.00</td></tr><tr><td>ಪುನರ್ ನೋಂದಣಿ ಶುಲ್ಕ</td><td>20000.00</td></tr><tr><td>ಅವಧಿ ವಿಸ್ತರಣ ಶುಲ್ಕ</td><td>10000.00</td></tr></table></td></tr>
<tr><td>ಎಂ.ಫಿಲ್–<br>ವಿಶಿಷ್ಟಾಚಾರ್ಯ</td><td>ಸಂಸ್ಕೃತ/ಶಾಸ್ತ್ರದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ. 55 ಅಂಕಗಳನ್ನು ಪಡೆದಿರುವವರು ಅರ್ಹರಾಗಿರುತ್ತಾರೆ. (ಪ.ಜಾ/ ಪ.ಪಂ. ಹಾಗೂ ಪ್ರವರ್ಗ1ರ ಅಭ್ಯರ್ಥಿಗಳಿಗೆ ಶೇ. 50).<br>2. ಸರ್ಕಾರದ ನಿಯಮಗಳಂತೆ ,ಮೀಸಲಾತಿ ಸೌಲಭ್ಯ ಹೊಂದಿರುವ ಅಭ್ಯರ್ಥಿಗಳಿಗೆ 50% ರಷ್ಟು ಶುಲ್ಕ ವಿನಾಯಿತಿ ಇರುತ್ತದೆ.</td><td><table><tr><th>ಶುಲ್ಕವಿವರ</th><th>ಮೊತ್ತ</th></tr><tr><td>ಅರ್ಜಿ ಮತ್ತು ಪ್ರವೇಶ ಪರೀಕ್ಷಾ ಶುಲ್ಕ</td><td>500.00</td></tr><tr><td>ಅರ್ಜಿ ಶುಲ್ಕ (ಪ್ರವೇಶ ಪರೀಕ್ಷೆ ವಿನಾಯಿತಿ ಇರುವವರಿಗೆ)</td><td>300.00</td></tr><tr><td>ನೋಂದಣಿ ಶುಲ್ಕ</td><td>1500.00</td></tr><tr><td>ಬೋಧನಾ (ಕೋರ್ಸ್‌ವರ್ಕ್) ಶುಲ್ಕ</td><td>1500.00</td></tr><tr><td>ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕ</td><td>500.00</td></tr><tr><td>ಪುನರ್ ಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ)</td><td>500.00</td></tr><tr><td>ಗ್ರಂಥಾಲಯ ಶುಲ್ಕ</td><td>500.00</td></tr><tr><td>ಶೋಧ ಪ್ರಬಂಧ ಸಮರ್ಪಣೆ & ಪರೀಕ್ಷಾ ಶುಲ್ಕ</td><td>500.00</td></tr><tr><td>ಘಟಿಕೋತ್ಸವ ಪ್ರಮಾಣ ಪತ್ರ (ಕನ್ನಡ ಮತ್ತುಇಂಗ್ಲಿಷ್)</td><td>500.00</td></tr></table></td></tr>
<tr><td>ಎಂ.ಎ –1. ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ<br>2. ಹಸ್ತಪ್ರತಿಶಾಸ್ತ್ರ ವಿಭಾಗ<br>3. ಅಲಂಕಾರ ಶಾಸ್ತ್ರ ವಿಭಾಗ<br>4. ವ್ಯಾಕರಣ ಶಾಸ್ತ್ರ ವಿಭಾಗ<br>5. ನ್ಯಾಯಶಾಸ್ತ್ರ ವಿಭಾಗ<br>6. ವೇದಾಂತ ವಿಭಾಗ ಎಂದು ಆರು ವಿಭಾಗಗಳು</td><td>1. ಸಂಸ್ಕೃತ ವಿಷಯ + ಯಾವುದೇ ಪದವಿ<br>2. ಸಂಸ್ಕೃತ ಸಾಹಿತ್ಯ ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ<br>3.ಸಂಸ್ಕೃತ/ಪಾಲಿ/ಪ್ರಾಕೃತ/ಹಸ್ತಪ್ರತಿಶಾಸ್ತ್ರಗಳ ಸರ್ಟಿಫಿಕೇಟ್/ಡಿಪ್ಲೋಮಾ + ಯಾವುದೇ ಪದವಿ<br>4. ಸುರಸರಸ್ವತೀ ಸಭೆ, ಶೃಂಗೇರಿ ಇವರ 'ಪ್ರವೇಶ' ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ<br>5.ಸಂಸ್ಕೃತ ಭಾರತಿಯ ಕೋವಿದ/ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ + ಯಾವುದೇ ಪದವಿ<br>6. ಯಾವುದೇ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣತೆ.</td><td>ಬೋಧನಾ ಶುಲ್ಕ : 5500/–<br>ಪ್ರವೇಶ ಶುಲ್ಕ : 500/–<br>ಲೈಬ್ರರಿ ಶುಲ್ಕ : 200/–<br>ಒಟ್ಟು : 6200/– (ಪರೀಕ್ಷಾ ಶುಲ್ಕವು ಪರೀಕ್ಷಾಂಗದಿಂದ ನಿಗದಿಯಾದಂತೆ ಸಲ್ಲಿಸುವುದು)</td></tr>
<tr><td>ಬಿ.ಎ–<br>ಸಾಮಾನ್ಯ ಸಂಸ್ಕೃತ</td><td>1. ಪಿ.ಯು.ಸಿ, ಸಾಹಿತ್ಯ, ಅಥವಾ ತತ್ಸಮಾನ ತರಗತಿಗಳಲ್ಲಿ ಸಂಸ್ಕೃತವನ್ನು ಭಾಷೆಯಾಗಿ ಆಯ್ಕೆ ಮಾಡಿಕೊಂಡವರು<br>2. ಸಂಸ್ಕೃತರಹಿತ ಪದವಿ ಪೂರ್ವ ಶಿಕ್ಷಣ/ತತ್ಸಮಾನ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣತೆ</td><td>ಶುಲ್ಕ ವಿವರ:<br>ಬೋಧನಾ ಶುಲ್ಕ : 3500/–<br>ಪ್ರವೇಶ ಶುಲ್ಕ : 500/–<br>ಲೈಬ್ರರಿ ಶುಲ್ಕ : 100/–<br>ಒಟ್ಟು : 4100/– (ಪರೀಕ್ಷಾ ಶುಲ್ಕವು ಪರೀಕ್ಷಾಂಗದಿಂದ ನಿಗದಿಯಾದಂತೆ ಸಲ್ಲಿಸುವುದು)</td></tr>
<tr><td>ಪಿ.ಜಿ. ಡಿಪ್ಲೋಮಾ–<br>1. ಹಸ್ತಪ್ರತಿಶಾಸ್ತ್ರ<br>2. ಶಾಬ್ದಬೋಧ</td><td>ಬಿ.ಎ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣತೆ.</td><td>ಶುಲ್ಕ ವಿವರ : ಬೋಧನಾ ಶುಲ್ಕ : 1800/–<br>ಪ್ರವೇಶ ಶುಲ್ಕ : 700/–<br>ಲೈಬ್ರರಿ ಶುಲ್ಕ : 100/–<br>ಒಟ್ಟು : 2600/–(ಪರೀಕ್ಷಾ ಶುಲ್ಕವು ಪರೀಕ್ಷಾಂಗದಿಂದ ನಿಗದಿಯಾದಂತೆ ಸಲ್ಲಿಸುವುದು)</td></tr>
<tr><td>ಡಿಪ್ಲೋಮಾ–</td><td>ಕನಿಷ್ಠ ಪಿ.ಯು.ಸಿ ಅಥವಾ ತತ್ಸಮಾನ</td><td>ಶುಲ್ಕ ವಿವರ : ಬೋಧನಾ ಶುಲ್ಕ :</td></tr>
</table>

| | | |
|---|---|---|
| ಸಂಸ್ಕೃತ ಡಿಪ್ಲೋಮಾ | ತರಗತಿಯಲ್ಲಿ ತೇರ್ಗಡೆ. | 1600/–<br>ಪ್ರವೇಶ ಶುಲ್ಕ : 500/–<br>ಲೈಬ್ರರಿ ಶುಲ್ಕ : 100/–<br>ಒಟ್ಟು : 2000/–(ಪರೀಕ್ಷಾ ಶುಲ್ಕವು ಪರೀಕ್ಷಾಂಗದಿಂದ ನಿಗದಿಯಾದಂತೆ ಸಲ್ಲಿಸುವುದು) |
| **ಸರ್ಟಿಫಿಕೇಟ್–**<br>1. ಸಂಸ್ಕೃತ ಭಾಷಾ ಸರ್ಟಿಫಿಕೇಟ್ ಕೋರ್ಸ್<br>2. ದ್ವೈತ ವೇದಾಂತ ಸರ್ಟಿಫಿಕೇಟ್ ಕೋರ್ಸ್<br>3. ಪಾಲಿ/ಪ್ರಾಕೃತ ಸರ್ಟಿಫಿಕೇಟ್ | ಕನಿಷ್ಠ ಪಿ.ಯು.ಸಿ ಅಥವಾ ತತ್ಸಮಾನ ತರಗತಿಯಲ್ಲಿ ತೇರ್ಗಡೆ. | ಶುಲ್ಕ ವಿವರ : ಬೋಧನಾ ಶುಲ್ಕ : 900/–<br>ಪ್ರವೇಶ ಶುಲ್ಕ : 500/–<br>ಲೈಬ್ರರಿ ಶುಲ್ಕ : 100/–<br>ಒಟ್ಟು : 1500/– (ಪರೀಕ್ಷಾ ಶುಲ್ಕವು ಪರೀಕ್ಷಾಂಗದಿಂದ ನಿಗದಿಯಾದಂತೆ ಸಲ್ಲಿಸುವುದು) |

- ಇತರ ಮಾನಿತ ಸಂಸ್ಥೆಗಳು ವಿಶ್ವವಿದ್ಯಾಲಯದಿಂದ ಅನುಮೋದನೆ ಪಡೆದು ನಡೆಸುವ ಸರ್ಟಿಫಿಕೇಟ್, ಡಿಪ್ಲೋಮಾ ಹಾಗೂ ಪಿ.ಜಿ+.ಡಿಪ್ಲೋಮಾ ಇತ್ಯಾದಿ ಕೋರ್ಸ್‌ಗಳಲ್ಲಿ (ಪಾಲಿ, ಪ್ರಾಕೃತ, ಯೋಗ ಇತ್ಯಾದಿ) ನೋಂದಣಿ ಶುಲ್ಕವಾಗಿ ಸರ್ಟಿಫಿಕೇಟ್– 1500/–, ಡಿಪ್ಲೋಮಾ– 2000/–, ಪಿ.ಜಿ ಡಿಪ್ಲೋಮಾ– 2600/– ವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಶೈಕ್ಷಣಿಕ ಅರ್ಹತೆಯು ಅಧ್ಯಯನ ಮಂಡಳಿಯ ಸಭೆಯಲ್ಲಿ ತೀರ್ಮಾನವಾಗಬೇಕಿರುವುದರಿಂದ ಮುಂದಿನ ಪ್ರಶಿಕ್ಷಣ ಪರಿಷತ್ತಿನಲ್ಲಿ ಮಂಡಿಸಲಾಗುವುದು. ವಿಶ್ವವಿದ್ಯಾಲಯದ ಪರೀಕ್ಷಾಂಗವು ಕಾಲ ಕಾಲಕ್ಕೆ ಪ್ರಕಟಿಸುವ ನಿಗದಿತ ಪರೀಕ್ಷಾ ಶುಲ್ಕವನ್ನು ಸಹ ಪಾವತಿಸತಕ್ಕದ್ದು.

ನಿರ್ಣಯ

**ವಿಶ್ವವಿದ್ಯಾಲಯದಲ್ಲಿ ಹಾಗೂ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಸಂಸ್ಥೆಗಳ ಮಾನಿತ ಕೋರ್ಸ್‌ಗಳ ಪ್ರವೇಶಾತಿ ಮತ್ತು ಶುಲ್ಕದ ವಿವರಗಳಿಗೆ ಪ್ರಶಿಕ್ಷಣ ಪರಿಷತ್ತು ಅನುಮೋದನೆ ನೀಡಿತು. ಪಿಎಚ್.ಡಿ–ವಿದ್ಯಾವಾರಿಧಿ ಕೋರ್ಸ್‌ನ ಅವಧಿ ವಿಸ್ತರಣ ಶುಲ್ಕವನ್ನು ರೂ. 5000/–ಕ್ಕೆ ನಿಗದಿಪಡಿಸಲು ಸಭೆಯು ನಿರ್ಣಯಿಸಿತು. ವಾರ್ಷಿಕ ಬೋಧನಾ ಶುಲ್ಕವಾದ ರೂ. 6500/– ಜೊತೆಗೆ ಈ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.**

ವಿಷಯ 02

**ಡಿ.ಲಿಟ್.– ವಿದ್ಯಾವಾಚಸ್ಪತಿ ಪದವಿಯ ಮೌಲ್ಯಮಾಪನ ಶುಲ್ಕವನ್ನು ಹೆಚ್ಚಿಸುವ ಬಗೆಗೆ**

ವಿಶ್ವವಿದ್ಯಾಲಯದ ಡಿ.ಲಿಟ್.–ವಿದ್ಯಾವಾಚಸ್ಪತಿ ಪದವಿಯ ಶೋಧ ಪ್ರಬಂಧಗಳ ಮೌಲ್ಯಮಾಪಕರಿಗೆ ಗೌರವಧನವಾಗಿ ಹಾಗೂ ಮೌಖಿಕ ಪರೀಕ್ಷೆಯ ಮೊತ್ತವಾಗಿ ರೂ. 1000/–ಗಳನ್ನು ಪಾವತಿಸಲಾಗುತ್ತಿದೆ. ಆದರೆ ಪಿಎಚ್.ಡಿತರಗತಿಯ ಮೌಲ್ಯಮಾಪಕರ ಗೌರವಧನ ಹಾಗೂ ಮೌಖಿಕ ಪರೀಕ್ಷೆಯ ಮೊತ್ತ ರೂ. 2000/–ಗಳಿರುವುದರಿಂದ ಡಿ.ಲಿಟ್ ಮೌಲ್ಯಮಾಪನದ ಹಾಗೂ ಮೌಖಿಕ ಪರೀಕ್ಷೆಯ ಶುಲ್ಕವನ್ನೂ ರೂ. 2500/–ಗಳಿಗೆ ಹೆಚ್ಚಿಸಿ ನೀಡಲು ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ.

ನಿರ್ಣಯ

**ಡಿ.ಲಿಟ್.–ವಿದ್ಯಾವಾಚಸ್ಪತಿ ಪದವಿಯ ಮೌಲ್ಯಮಾಪನ ಹಾಗೂ ಮೌಖಿಕ ಪರೀಕ್ಷೆಯ ಶುಲ್ಕವನ್ನು ರೂ. 2500/–ಗಳಿಗೆ ಹೆಚ್ಚಿಸಲು ಸಭೆಯು ಅನುಮತಿ ನೀಡಿತು.**

ವಿಷಯ 03

**ಮೌಲ್ಯಮಾಪನ ಸಂಭಾವನೆ ಪರಿಷ್ಕರಣೆ ಮಾಡುವ ಬಗ್ಗೆ.**

ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಅಧೀನ ಕಾಲೇಜುಗಳಲ್ಲಿ ಬಿ.ಎ ಶಾಸ್ತ್ರೀ ಹಾಗೂ ಎಂ.ಎ. ಆಚಾರ್ಯ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಮುಖ್ಯಾಧೀಕ್ಷಕರು ಹಾಗೂ ಇತರ ವಿದ್ವಾಂಸರು ತಮ್ಮ ಸಂಭಾವನೆಯನ್ನು ಪರಿಷ್ಕರಣೆ ಮಾಡಲು ಮನವಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಮುಂದಿನ ಚರ್ಚೆಗಾಗಿ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಿದೆ.

| ಕ್ರ.ಸಂ | ಮುಖ್ಯಾಧೀಕ್ಷಕರು & ವಿದ್ವಾಂಸರ ಹಾಗೂ ಸಿಬ್ಬಂದಿಗಳ ವಿವರ | ಹಾಲಿ ಪಡೆಯುತ್ತಿರುವ ಸಂಭಾವನೆ | ಪರಿಷ್ಕರಿಸಬಹುದಾದ ಸಂಭಾವನೆ |
|---|---|---|---|
| 1. | ಕೇಂದ್ರ ಮುಖ್ಯಾಧೀಕ್ಷಕರಿಗೆ (ಎಲ್ಲಾ ಭತ್ಯೆಗಳು ಸೇರಿದಂತೆ) | 750.00 | 850.00 |
| 2. | ಸಹಾಯಕ ಮುಖ್ಯಾಧೀಕ್ಷಕರಿಗೆ (ಎಲ್ಲಾ ಭತ್ಯೆಗಳು ಸೇರಿದಂತೆ) | 600.00 | 650.00 |
| 3. | ಕಛೇರಿ ಸಹಾಯಕರಿಗೆ (ಎಲ್ಲಾ ಭತ್ಯೆಗಳು ಸೇರಿದಂತೆ) | 300.00 | 350.00 |

| | | | |
|---|---|---|---|
| 4. | ಡಿ' ಗ್ರೂಪ್ ನೌಕರರಿಗೆ (ಎಲ್ಲಾ ಭತ್ಯೆಗಳು ಸೇರಿದಂತೆ) | 100.00 | 120.00 |
| 5. | ಮೌಲ್ಯಮಾಪಕರ ದಿನಭತ್ಯೆಗಳು | 300.00 | 350.00 |
| 6. | ಉತ್ತರ ಪತ್ರಿಕೆಗಳ ಸಂಭಾವನೆ<br>ಅ) ಬಿ.ಎ 1 ಪತ್ರಿಕೆಗೆ<br>ಆ) ಎಂ.ಎ 1 ಪತ್ರಿಕೆಗೆ | <br>10.00<br>12.00 | <br>12.00<br>15.00 |

| | |
|---|---|
| ನಿರ್ಣಯ | **ಬಿ.ಎ. ಶಾಸ್ತ್ರೀ ಹಾಗೂ ಎಂ.ಎ. ಆಚಾರ್ಯ ಪರೀಕ್ಷೆಗಳ ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಮುಖ್ಯಾಧೀಕ್ಷಕರು ಹಾಗೂ ಇತರ ವಿದ್ವಾಂಸರಿಗೆ ಮೇಲ್ಕಂಡಂತೆ ಸಂಭಾವನೆಯನ್ನು ಪರಿಷ್ಕರಿಸಲು ಸಭೆಯು ಅನುಮತಿ ನೀಡಿತು. ಉತ್ತರಪತ್ರಿಕೆಗಳ ಮೌಲ್ಯಮಾಪನ ಸಂಭಾವನೆ ಕುರಿತಂತೆ ನಿರ್ದಿಷ್ಟ ಪತ್ರಿಕೆಗೆ ಸಂಬಂಧಿಸಿ ಅತ್ಯಂತ ಕಡಿಮೆ ಸಂಖ್ಯೆಯ ಪತ್ರಿಕೆಗಳಿದ್ದಲ್ಲಿ ಕನಿಷ್ಠ ರೂ. 100/-ಗಳನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು.** |
| ವಿಷಯ 04 | **ಜೋತಿಷ್ಯ ಮೌಲ್ಯಮಾಪನ ಕೇಂದ್ರಗಳಲ್ಲಿ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ.**<br>ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಜೋತಿಷ್ಯ ಕೇಂದ್ರಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆ ತಯಾರಿಕೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮತ್ತು ಕೊಠಡಿ ಮೇಲ್ವಿಚಾರಕರ ಸಂಭಾವನೆಯನ್ನು ಪದವಿಪೂರ್ವ ಶಿಕ್ಷಣಕ್ಕೆ ಸಮನಾಗಿ ಪರಿಷ್ಕರಿಸಲು ಮನವಿ ಸಲ್ಲಿಸಿದ್ದು ಮುಂದಿನ ಚರ್ಚೆಗಾಗಿ ಪ್ರಶಿಕ್ಷಣ ಪರಿಷತ್ತಿನಲ್ಲಿ ಮಂಡಿಸಿದೆ. |
| ನಿರ್ಣಯ | **ಜೋತಿಷ್ಯ ಮೌಲ್ಯಮಾಪನ ಕೇಂದ್ರಗಳಲ್ಲಿ ಸಂಭಾವನೆಯನ್ನು ಕಳೆದ ವರ್ಷ ಹೆಚ್ಚಿಸಿರುವುದರಿಂದ ಈ ಸಾಲಿನಲ್ಲಿ ಯಥಾಪೂರ್ವದಂತೆ ಮುಂದುವರೆಸಲು ಸಭೆಯು ನಿರ್ಣಯಿಸಿತು.** |
| ವಿಷಯ 05 | **ಪಿಎಚ್.ಡಿ ಮಾರ್ಗದರ್ಶಕರನ್ನು ನೇಮಿಸಿಕೊಂಡಿದ್ದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>2019-20ನೇ ಸಾಲಿನಿಂದ ಈ ಕೆಳಕಂಡ ಬಾಹ್ಯ ವಿದ್ವಾಂಸರನ್ನು ಪಿಎಚ್.ಡಿ (ವಿದ್ಯಾವಾರಿಧಿ)ಯ ಮಾರ್ಗದರ್ಶಕರನ್ನಾಗಿ ನಿಯೋಜಿಸಿ ಆದೇಶಿಸಲಾಗಿದೆ.<br>1. ಡಾ. ಮಹಾಬಲೇಶ್ವರ ಎಸ್. ಭಟ್ – ಅದ್ವೈತ ವೇದಾಂತ<br>2. ಡಾ. ವಿನಯಚಂದ್ರ ಬಿ.ಕೆ – ಅದ್ವೈತ ವೇದಾಂತ ಮತ್ತು ಅಂತಾಶಾಸ್ತ್ರೀಯ ಅಧ್ಯಯನ<br>3. ಡಾ. ಎಲ್. ಎಸ್. ವಾದಿರಾಜ ಆಚಾರ್ಯ – ದ್ವೈತ ವೇದಾಂತ<br>4. ಡಾ. ಕೃಷ್ಣರಾಜ ಉಪಾಧ್ಯಾಯ – ದ್ವೈತ ವೇದಾಂತ<br>ಇದಕ್ಕೆ ಘಟನೋತ್ತರ ಅನುಮತಿ ಕೋರಿ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ ಮಂಡಿಸಲಾಗಿದೆ. |
| ನಿರ್ಣಯ | **ಬಾಹ್ಯ ವಿದ್ವಾಂಸರನ್ನು ಪಿಎಚ್.ಡಿ (ವಿದ್ಯಾವಾರಿಧಿ)ಯ ಮಾರ್ಗದರ್ಶಕರನ್ನಾಗಿ ನೇಮಿಸಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.** |
| **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು** | |
| ವಿಷಯ 01 | **ಯುಜಿಸಿ 7ನೇ ಪರಿಷ್ಕೃತ ವೇತನದ ಪರಿನಿಯಮಕ್ಕೆ ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ.**<br>ಕೇಂದ್ರ ಸರ್ಕಾರವು ರಾಜ್ಯದ ವಿಶ್ವವಿದ್ಯಾಲಯಗಳ ಯುಜಿಸಿ ವೇತನಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಯುಜಿಸಿ 7ನೇ ವೇತನ ಶ್ರೇಣಿಯನ್ನು ವಿಸ್ತರಿಸಿದೆ. ಇದರಂತೆ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ: ಇಡಿ 483 ಯುಎನ್ ಇ 2017, ದಿನಾಂಕ: 16.03.2019ರಂತೆ ರಾಜ್ಯದ ವಿಶ್ವವಿದ್ಯಾಲಯಗಳ ಯುಜಿಸಿ ವೇತನ ಶ್ರೇಣಿಯ ಸಿಬ್ಬಂದಿಗಳಿಗೆ 7ನೇ ಯುಜಿಸಿ ವೇತನ ಶ್ರೇಣಿಯನ್ನು ದಿನಾಂಕ: 01.01.2016ರಿಂದ ಜಾರಿಗೆ ಬರುವಂತೆ ಜಾರಿಗೊಳಿಸಿದೆ. ಆದರೆ ಹಣಕಾಸಿನ ಸೌಲಭ್ಯವನ್ನು 01.04.2019ರಿಂದ ನೀಡುವಂತೆ ನಿರ್ದೇಶನ ನೀಡಿದೆ. ಈ ಅಂತರದ ವೇತನಬಾಕಿಯನ್ನು ಕೇಂದ್ರ ಸರ್ಕಾರದ ಶೇ. 50ರಷ್ಟು ಅನುದಾನವನ್ನು ಸ್ವೀಕರಿಸಿದ ನಂತರ ನೀಡಲಾಗುವುದು ಎಂದು ತಿಳಿಸಿದೆ. ಅಲ್ಲದೇ ಪರಿಷ್ಕೃತ 7ನೇ ವೇತನ ಶ್ರೇಣಿಯನ್ನು ವಿಸ್ತರಿಸುವ ಸಂಬಂಧ ಪರಿನಿಯಮವನ್ನು ರಚಿಸಿಕೊಳ್ಳುವಂತೆ ತಿಳಿಸಿದೆ. ಹಾಗಾಗಿ ಯುಜಿಸಿ ನಿಯಮಾವಳಿಗಳು ಮತ್ತು ಸರ್ಕಾರದ ಆದೇಶಗಳನ್ನು ಆಧರಿಸಿ STATUTE RELATING TO DIRECT RECRUITMENT AND CAREER ADVANCEMENT SCHEME AND MISCELLANEOUS PROVISIONS TO IMPLEMENT THE REVISED UGC PAY SCALES TO TEACHERS, LIBRARIAN AND EQUIVALENT CADRE PERSONNEL OF KSU 2019ನ್ನು ರಚಿಸಿ ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಯುಜಿಸಿ 7ನೇ ಪರಿಷ್ಕೃತ ವೇತನದ ಪರಿನಿಯಮಕ್ಕೆ ಸರ್ಕಾರದ ಅನುಮೋದನೆ ಪಡೆಯಲು ಪ್ರಶಿಕ್ಷಣ ಪರಿಷತ್ತು ಅನುಮತಿಸಿತು.** |

| | |
|---|---|
| ವಿಷಯ 02 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009ರ ತಿದ್ದುಪಡಿಗೆ ಅನುಮೋದನೆ ನೀಡುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009ರಲ್ಲಿ ಘಟಕ ಕಾಲೇಜುಗಳ ಸಿಬ್ಬಂದಿಗಳ ವಿಲೀನೀಕರಣಕ್ಕೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಿಕೊಳ್ಳಲಾಗಿರುವುದಿಲ್ಲ. ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಮತ್ತು ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾಲಯದಲ್ಲಿ ವಿಲೀನಕರಣಗೊಳಿಸಬೇಕಿದ್ದು, ಇದಕ್ಕೆ ಪೂರಕವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009ಕ್ಕೆ ತಿದ್ದುಪಡಿಯನ್ನು ಮಾಡಲಾಗಿದೆ. ಈ ತಿದ್ದುಪಡಿ ಅಧಿನಿಯಮಕ್ಕೆ ಸರ್ಕಾರದಿಂದ ಅನುಮೋದನೆಯನ್ನು ಪಡೆಯಬೇಕಿದ್ದು, ಸರ್ಕಾರಕ್ಕೆ ಸಲ್ಲಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009ರ ತಿದ್ದುಪಡಿಗೆ ಸರ್ಕಾರದ ಅನುಮೋದನೆ ಪಡೆಯಲು ಪ್ರಶಿಕ್ಷಣ ಪರಿಷತ್ತು ಅನುಮತಿ ನೀಡಿತು.** |
| ವಿಷಯ 03 | **ಶಕ್ತಿವಿಶಿಷ್ಟಾದ್ವೈತ ವೇದಾಂತ ವಿಭಾಗದ ಪಠ್ಯವಾಗಿ 'ಸಿದ್ಧಾಂತ ಶಿಖಾಮಣಿ'ಯ ಪರಿಷ್ಕೃತ ಆವೃತ್ತಿಯನ್ನು ಅಳವಡಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಕಾಲೇಜುಗಳಲ್ಲಿ ಈಗಾಗಲೇ ಶಕ್ತಿವಿಶಿಷ್ಟಾದ್ವೈತ ವೇದಾಂತ ಶಾಸ್ತ್ರವನ್ನು ಬೋಧಿಸುತ್ತಿರುವುದು ಸರಿಯಷ್ಟೆ. ಪ್ರೊ. ಸಿದ್ಧಗಂಗಯ್ಯರವರು ಪರಿಷ್ಕರಿಸಿ ಸಂಪಾದಿಸಿರುವ 'ಸಿದ್ಧಾಂತ ಶಿಖಾಮಣಿ' ಆವೃತ್ತಿಯನ್ನು 2019–20ನೇ ಸಾಲಿನಿಂದ ಶಕ್ತಿವಿಶಿಷ್ಟಾದ್ವೈತ ವೇದಾಂತ ವಿಭಾಗಕ್ಕೆ ಪಠ್ಯವಾಗಿ ಅಳವಡಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಶಕ್ತಿವಿಶಿಷ್ಟಾದ್ವೈತ ವೇದಾಂತ ವಿಭಾಗದ ಪಠ್ಯವಾಗಿ ಪರಿಷ್ಕೃತ 'ಸಿದ್ಧಾಂತ ಶಿಖಾಮಣಿ'ಯನ್ನು ಅಳವಡಿಸಲು ಪ್ರಶಿಕ್ಷಣ ಪರಿಷತ್ತು ಅನುಮತಿ ನೀಡಿತು.** |
| ವಿಷಯ 04 | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನಲ್ಲಿ ಶ್ರೀ ಭಗವದ್ರಾಮಾನುಜಾಚಾರ್ಯರ ಜೀವನ–ದರ್ಶನ ಕುರಿತಂತೆ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೊಮಾ ಕೋರ್ಸ್ ಪ್ರಾರಂಭಿಸುವ ಬಗೆಗೆ.**<br>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ ಭಗವದ್ರಾಮಾನುಜಾಚಾರ್ಯರ ಜೀವನ–ದರ್ಶನ–ಸಿದ್ಧಾಂತ–ಕೃತಿಗಳನ್ನು ಕುರಿತಂತೆ 2020–21ನೇ ಸಾಲಿನಿಂದ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೋಮಾ ಕೋರ್ಸ್‌ಗಳ ಪಠ್ಯಕ್ರಮವನ್ನು ಸಿದ್ಧಪಡಿಸಲು ಪಠ್ಯಕ್ರಮ ರಚನಾ ಸಮಿತಿಯನ್ನು ರಚಿಸಬೇಕಾಗಿದ್ದು, ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನಲ್ಲಿ ಶ್ರೀ ಭಗವದ್ರಾಮಾನುಜಾಚಾರ್ಯರ ಜೀವನ–ದರ್ಶನ ಕುರಿತಂತೆ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಲು ಈ ಕೆಳಕಂಡಂತೆ ಪಠ್ಯಕ್ರಮ ರಚನಾ ಸಮಿತಿಯನ್ನು ರೂಪಿಸಲು ಸಭೆಯು ಸೂಚಿಸಿತು.**<br>1. **ಡಾ. ಬಿ.ವಿ. ವೆಂಕಟರಮಣ,** ನಿರ್ದೇಶಕರು, ಅಧ್ಯಯನಾಂಗ – **ಅಧ್ಯಕ್ಷರು**<br>2. **ಡಾ. ಎಸ್.ಎನ್. ಶೆಲ್ವಪಿಳ್ಳೆ ಅಯ್ಯಂಗಾರ್,** ಸಹಾಯಕ ಪ್ರಾಧ್ಯಾಪಕರು, ಕ.ರಾ.ಮು.ವಿ. ಮೈಸೂರು – **ಸದಸ್ಯರು**<br>3. **ಪ್ರೊ. ಇಂದಿರಮ್ಮ,** ನಿವೃತ್ತ ಪ್ರಾಚಾರ್ಯರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು – **ಸದಸ್ಯರು**<br>4. **ನಿರ್ದೇಶಕರು,** ಸಂಸ್ಕೃತ ಸಂಶೋಧನ ಸಂಸತ್ – **ಸದಸ್ಯರು**<br>5. **ಕುಲಸಚಿವರು (ಆಡಳಿತ),** ಸಂಸ್ಕೃತ ಸಂಶೋಧನ ಸಂಸತ್ – **ಸದಸ್ಯ ಸಂಚಾಲಕರು** |
| ವಿಷಯ 05 | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನಲ್ಲಿ 'ಮೇಲುಕೋಟೆ ಪ್ರವಾಸೋದ್ಯಮ' ಕುರಿತ ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭಿಸುವ ಬಗೆಗೆ.**<br>ಮಂಡ್ಯ ಜಿಲ್ಲೆಯ ಮೇಲುಕೋಟೆಯು ಐತಿಹಾಸಿಕ ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ಪ್ರವಾಸೋದ್ಯಮ ಅಧ್ಯಯನಕ್ಕೆ ಅಗತ್ಯವಾದ ಪ್ರಾಕ್ತನ ಮಂದಿರಗಳು ಮತ್ತು ಅಧ್ಯಯನಯೋಗ್ಯ ಐತಿಹಾಸಿಕ ಸಂಗತಿಗಳು ಮೇಲುಕೋಟೆಯಲ್ಲಿವೆ. ಈ ಹಿನ್ನೆಲೆಯಲ್ಲಿ ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ 'ಮೇಲುಕೋಟೆ ಪ್ರವಾಸೋದ್ಯಮ' ಕುರಿತ 'ಸರ್ಟಿಫಿಕೇಟ್ ಕೋರ್ಸ್'ಅನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸರ್ಟಿಫಿಕೇಟ್ ಕೋರ್ಸ್‌ನ ಪಠ್ಯಕ್ರಮವನ್ನು ಸಿದ್ಧಪಡಿಸಲು ಪಠ್ಯಕ್ರಮ ರಚನಾ ಸಮಿತಿಯನ್ನು ರಚಿಸಬೇಕಾಗಿದ್ದು, ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |

| | |
|---|---|
| ನಿರ್ಣಯ | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನಲ್ಲಿ 'ಮೇಲುಕೋಟೆ ಪ್ರವಾಸೋದ್ಯಮ' ಕುರಿತ ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭಿಸಲು ಈ ಕೆಳಕಂಡಂತೆ ಪಠ್ಯಕ್ರಮ ರಚನಾ ಸಮಿತಿಯನ್ನು ರಚಿಸಲು ಸಭೆಯು ಸೂಚಿಸಿತು.**<br>1. **ಡಾ. ಬಿ.ವಿ. ವೆಂಕಟರಮಣ,** ನಿರ್ದೇಶಕರು, ಅಧ್ಯಯನಾಂಗ – **ಅಧ್ಯಕ್ಷರು**<br>2. **ಡಾ. ರಂಗರಾಜು,** ಮೈಸೂರು ವಿಶ್ವವಿದ್ಯಾಲಯ, ಮೈಸೂರು – **ಸದಸ್ಯರು**<br>3. **ಉಪನಿರ್ದೇಶಕರು,** ಪ್ರವಾಸೋದ್ಯಮ ಇಲಾಖೆ, ಮಂಡ್ಯ ವಿಭಾಗ– **ಸದಸ್ಯರು**<br>4. **ನಿರ್ದೇಶಕರು,** ಸಂಸ್ಕೃತ ಸಂಶೋಧನ ಸಂಸತ್ – **ಸದಸ್ಯರು**<br>5. **ಕುಲಸಚಿವರು (ಆಡಳಿತ),** ಸಂಸ್ಕೃತ ಸಂಶೋಧನ ಸಂಸತ್ – **ಸದಸ್ಯ ಸಂಚಾಲಕರು** |
| ವಿಷಯ 06 | **ಜ್ಯೋತಿಷ್ಯ ಮತ್ತು ವಾಸ್ತು ವಿಷಯಗಳ ಸರ್ಟಿಫಿಕೇಟ್ ಮತ್ತು ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಾತಿ ನಿಯಮಗಳನ್ನು ಸಡಿಲಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜ್ಯೋತಿಷ್ಯ ಮತ್ತು ವಾಸ್ತು ವಿಷಯಗಳ ಸರ್ಟಿಫಿಕೇಟ್ ಮತ್ತು ಡಿಪ್ಲೋಮಾ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ರೂಪಿಸಿಕೊಳ್ಳಲಾಗಿರುವ ಪರಿನಿಯಮದಲ್ಲಿ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿತ್ತು. ದಿ ಕರ್ನಾಟಕ ಸ್ಟೇಟ್ ಫೆಡರೇಶನ್ ಆಫ್ ಅಸ್ಟ್ರೋಲಾಜರ್ಸ್ ಅಂಡ್ ಅಸ್ಟ್ರಾಲಾಜಿಕಲ್ ಇನ್‌ಸ್ಟಿಟ್ಯೂಶನ್ಸ್ (ರಿ.) ಸಂಸ್ಥೆಯವರು ಪತ್ರವನ್ನು ನೀಡಿ ಸರ್ಟಿಫಿಕೇಟ್ ಮತ್ತು ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಮಿತಿಯನ್ನು ಸಡಿಲಿಸುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ಜ್ಯೋತಿಷ್ಯ ಮತ್ತು ವಾಸ್ತು ವಿಷಯಗಳ ಸರ್ಟಿಫಿಕೇಟ್ ಮತ್ತು ಡಿಪ್ಲೋಮಾ ಕೋರ್ಸ್‌ಗಳಿಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ನಿಯಮಗಳನ್ನು ಸಡಿಲಿಸುವುದಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಜ್ಯೋತಿಷ್ಯ ಮತ್ತು ವಾಸ್ತು ವಿಷಯಗಳ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಮಿತಿಯನ್ನು ಸಡಿಲಿಸಬಹುದಾಗಿದ್ದು, ಸರ್ಟಿಫಿಕೇಟ್ ಕೋರ್ಸ್ ಪ್ರವೇಶಾತಿಗೆ ಈ ಹಿಂದೆ ನಿಗದಿಪಡಿಸಲಾಗಿದ್ದ ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯ ಬದಲಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯನ್ನು ಪರಿಗಣಿಸುವಂತೆ ಪ್ರಶಿಕ್ಷಣ ಪರಿಷತ್ತು ನಿರ್ಣಯಿಸಿತು. ಆದರೆ ಬಿ.ಎ ಪದವಿಗೆ ಪಿ.ಯು.ಸಿ. ವಿದ್ಯಾರ್ಹತೆ ಕಡ್ಡಾಯವಾಗಿರುತ್ತದೆ.** |
| ವಿಷಯ 07 | **ಶ್ರೀ ವ್ಯಾಸತೀರ್ಥ ಸಂಶೋಧನ ಪ್ರತಿಷ್ಠಾನ, ಶ್ರೀ ವ್ಯಾಸರಾಜ ಮಠ, ಕೃಷ್ಣಮೂರ್ತಿಪುರಂ, ಮೈಸೂರು –ಈ ಸಂಸ್ಥೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನ ಕೇಂದ್ರ' ಮಾನ್ಯತೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನ ಕೇಂದ್ರ'ದ ಮಾನ್ಯತೆಯನ್ನು ನೀಡುವಂತೆ ಕೋರಿ ಶ್ರೀ ವ್ಯಾಸತೀರ್ಥ ಸಂಶೋಧನ ಪ್ರತಿಷ್ಠಾನ, ಶ್ರೀ ವ್ಯಾಸರಾಜ ಮಠ, ಕೃಷ್ಣಮೂರ್ತಿಪುರಂ, ಮೈಸೂರು –ಈ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಈ ಸಂಸ್ಥೆಯು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ, ವಿಶ್ವವಿದ್ಯಾಲಯದ ಮಾನ್ಯತೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಶ್ರೀ ವ್ಯಾಸತೀರ್ಥ ಸಂಶೋಧನ ಪ್ರತಿಷ್ಠಾನಕ್ಕೆ ಭೇಟಿ ನೀಡಿ, ಸಂಸ್ಥೆಯು ನಡೆಸುತ್ತಿರುವ ಶೈಕ್ಷಣಿಕ ಕಾರ್ಯಗಳ ಪರಿಶೀಲನೆಯನ್ನು ನಡೆಸಿ, ಈ ಸಂಸ್ಥೆಗೆ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರ' ಮಾನ್ಯತೆಯನ್ನು ನೀಡಲು ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ, ಶ್ರೀ ವ್ಯಾಸತೀರ್ಥ ಸಂಶೋಧನ ಪ್ರತಿಷ್ಠಾನಕ್ಕೆ 'ಸಂಶೋಧನ ಕೇಂದ್ರ'ದ ಮಾನ್ಯತೆ ನೀಡಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಶ್ರೀ ವ್ಯಾಸತೀರ್ಥ ಸಂಶೋಧನ ಪ್ರತಿಷ್ಠಾನ, ಶ್ರೀ ವ್ಯಾಸರಾಜ ಮಠ, ಕೃಷ್ಣಮೂರ್ತಿಪುರಂ, ಮೈಸೂರು –ಈ ಸಂಸ್ಥೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನ ಕೇಂದ್ರ' ಮಾನ್ಯತೆ ನೀಡಲು ಪ್ರಶಿಕ್ಷಣ ಪರಿಷತ್ತು ಅನುಮೋದನೆ ನೀಡಿತು.** |
| ವಿಷಯ 08 | **'Yoga Wellness Centre' ಸಂಸ್ಥೆಗೆ 'ಯೋಗ ಅಧ್ಯಯನ ಕೇಂದ್ರ'ದ ಮಾನ್ಯತೆ ನೀಡುವ ಬಗ್ಗೆ ಹಾಗೂ ಯೋಗ ಸರ್ಟಿಫಿಕೇಟ್ ಮತ್ತು ಯೋಗ ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸಲು ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಯೋಗ ಅಧ್ಯಯನ ಕೇಂದ್ರ'ದ ಮಾನ್ಯತೆಯನ್ನು ನೀಡುವಂತೆ ಹಾಗೂ 'ಯೋಗ ಸರ್ಟಿಫಿಕೇಟ್ ಕೋರ್ಸ್' ಮತ್ತು 'ಯೋಗ ಡಿಪ್ಲೋಮಾ ಕೋರ್ಸ್'ಗಳನ್ನು ನಡೆಸಲು ಅನುಮತಿ ನೀಡುವಂತೆ ಕೋರಿ ಯೋಗ ವೆಲ್‌ನೆಸ್ ಸೆಂಟರ್, ಕಸ್ತೂರಿ ನಗರ, ಬೆಂಗಳೂರು –ಈ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಈ ಸಂಸ್ಥೆಯು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ, |

| | |
|---|---|
| | ವಿಶ್ವವಿದ್ಯಾಲಯದ ಮಾನ್ಯತೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಯೋಗ ವೆಲ್‌ನೆಸ್ ಸೆಂಟರ್ ಸಂಸ್ಥೆಗೆ ಭೇಟಿ ನೀಡಿ, ಪರಿಶೀಲನೆಯನ್ನು ನಡೆಸಿ, ಈ ಸಂಸ್ಥೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಯೋಗ ಅಧ್ಯಯನ ಕೇಂದ್ರ' ಮಾನ್ಯತೆಯನ್ನು ನೀಡಲು ಹಾಗೂ ಈ ಕೇಂದ್ರದಲ್ಲಿ 'ಯೋಗ ಸರ್ಟಿಫಿಕೇಟ್ ಕೋರ್ಸ್' ಮತ್ತು 'ಯೋಗ ಡಿಪ್ಲೋಮಾ ಕೋರ್ಸ್'ಗಳನ್ನು ನಡೆಸಲು ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ 'ಯೋಗ ಅಧ್ಯಯನ ಕೇಂದ್ರ'ದ ಮಾನ್ಯತೆ ನೀಡಲು ಹಾಗೂ 'ಯೋಗ ಸರ್ಟಿಫಿಕೇಟ್ ಕೋರ್ಸ್' ಮತ್ತು 'ಯೋಗ ಡಿಪ್ಲೋಮಾ ಕೋರ್ಸ್'ಗಳನ್ನು ನಡೆಸಲು ಅನುಮತಿ ನೀಡಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **'Yoga Wellness Centre' ಸಂಸ್ಥೆಗೆ 'ಯೋಗ ಅಧ್ಯಯನ ಕೇಂದ್ರ'ದ ಮಾನ್ಯತೆ ನೀಡಲು ಹಾಗೂ ಯೋಗ ಸರ್ಟಿಫಿಕೇಟ್ ಮತ್ತು ಯೋಗ ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸುವುದಕ್ಕೆ ಅನುಮತಿ ನೀಡಲು ಪ್ರಶಿಕ್ಷಣ ಪರಿಷತ್ತು ಅನುಮೋದನೆಯನ್ನು ನೀಡಿತು.** |
| ವಿಷಯ 09 | **ಬಿ.ಎ ತರಗತಿಯ ಸಾಮಾನ್ಯ ಪತ್ರಿಕೆಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಬರೆಯಲು ಅನುಮತಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ಬಿ.ಎ ತರಗತಿಯ 6ನೇ ಪತ್ರಿಕೆಯನ್ನಾಗಿ ಇತಿಹಾಸವನ್ನು ಕಡ್ಡಾಯವಾಗಿರಿಸಲಾಗಿದೆ. ಈ ಪತ್ರಿಕೆಯನ್ನು ಕನ್ನಡ ಮಾಧ್ಯಮದಲ್ಲಿ ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಆದರೆ ಕೆಲವು ಕಾಲೇಜುಗಳಲ್ಲಿ ಕರ್ನಾಟಕೇತರ ವಿದ್ಯಾರ್ಥಿಗಳೂ ಪ್ರವೇಶ ಪಡೆದಿರುವುದರಿಂದ ಇಂಥ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಕನ್ನಡ ಅಥವಾ ಇಂಗ್ಲೀಷ್ ಮಾಧ್ಯಮದಲ್ಲಿ ಉತ್ತರಿಸಬಹುದಾದ ಅವಕಾಶ ನೀಡಬಹುದಾಗಿದ್ದು ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅಹಗಾಹನೆಗಾಗಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ಬಿ.ಎ ತರಗತಿಯ 6ನೇ ಪತ್ರಿಕೆಯಾದ ಇತಿಹಾಸ ಪತ್ರಿಕೆಯನ್ನು ಕನ್ನಡ ಅಥವಾ ಇಂಗ್ಲೀಷ್ ಮಾಧ್ಯಮದಲ್ಲಿ ಬರೆಯಲು ಪ್ರಶಿಕ್ಷಣ ಪರಿಷತ್ತು ಅನುಮೋದನೆ ನೀಡಿತು.** |

**ಶ್ರೀಮತಿ ಶಿಲ್ಪ.ಎಂ. ಕ.ಆ.ಸೇ**
**ಕುಲಸಚಿವರು**

**ಪ್ರೊ. ಪದ್ಮಾ ಶೇಖರ್**
**ಕುಲಪತಿಗಳು**